# ಕರ್ನಾಟಕ ಸರ್ಕಾರದ ನಡವಳಿಗಳು

(8)

ವಿಷಯ:- ದಿವಂಗತ ಎಂ.ಎನ್.ದೇವಶಿ ಖಾಮಣಿ, ಹಿಂದಿನ ಕೃಷಿ ಅಧಿಕಾರಿ, **ಕೃಷಿ ಪಾಠಶಾಲೆ, ದೇವಿಹೊಸೂರು ಇವರ ವಿರುದ್ಧ ಶಿಸ್ತು ಕ್ರಮ.**

******

**ಓದಲಾಗಿದೆ:-**

1) ಸರ್ಕಾರದ ಆದೇಶ ಸಂ. ಕೃತೋಇ 7 ಕೃಪವಿ 94, ದಿನಾಂಕ: 10-07-1997
2) ಮಾನ್ಯ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಅರ್ಜಿ ಸಂ. 5792/1997 ರಲ್ಲಿ ದಿನಾಂಕ: 07-12-2009 ರಂದು ನೀಡಿದ ತೀರ್ಪು.
3) ಕರ್ನಾಟಕ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ರಿಟ್ ಅರ್ಜಿ ಸಂ. 63156/2010( ಎಸ್-ಕೆಎಟಿ) ರಲ್ಲಿ ದಿನಾಂಕ: 27-08-2012ರಂದು ನೀಡಿದ ತೀರ್ಪು.

**ಪ್ರಸ್ತಾವನೆ:-**

ಶ್ರೀ ಎಂ. ಎನ್. ದೇವಶಿಖಾಮಣಿ, ಕೃಷಿ ಅಧಿಕಾರಿ, (ದಿವಂಗತ) ಇವರು ಈ ಹಿಂದೆ ಕೃಷಿ ಅಧಿಕಾರಿಯಾಗಿ ಕೃಷಿ ಪಾಠಶಾಲೆ, ದೇವಿ ಹೊಸೂರು, ಧಾರವಾಡ ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾಗ, ಸರ್ಕಾರದ ಹಣ ರೂ. 61,747-00ಗಳನ್ನು ದುರುಪಯೋಗ ಪಡಿಸಿಕೊಂಡಿರುವ ಆರೋಪಗಳಿಗೆ ಸಂಬಂಧಿಸಿದಂತೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 11ರಡಿಯಲ್ಲಿ ಕಾರಣ ಕೇಳುವ ಪತ್ರವನ್ನು ದೋಷಾರೋಪಣಾ ಪಟ್ಟಿಯೊಂದಿಗೆ ಜಾರಿ ಮಾಡಿ ಸದರಿ ಆರೋಪಗಳಿಗೆ ಸಂಬಂಧಿಸಿದಂತೆ ಲಿಖಿತ ಹೇಳಿಕೆಯನ್ನು ನೀಡುವಂತೆ ಸೂಚಿಸಲಾಗಿತ್ತು.

ಸದರಿಯವರು ಸದರಿ ಕಾರಣ ಕೇಳುವ ಪತ್ರಕ್ಕೆ (ದೋಷಾರೋಪಣಾ ಪಟ್ಟಿ) ನಿಗದಿತ ಅವಧಿಯಲ್ಲಿ ಲಿಖಿತ ಹೇಳಿಕೆ ಸಲ್ಲಿಸಲಿಲ್ಲದ ಕಾರಣ ಸದರಿಯವರ ಮೇಲಿರುವ ಆರೋಪಗಳ ಬಗ್ಗೆ ಸತ್ಯಾ-ಸತ್ಯತೆಯನ್ನು ಕಂಡುಕೊಳ್ಳುವ ಸಲುವಾಗಿ ಪ್ರಕರಣವನ್ನು ವಿಚಾರಣೆಗೊಳಪಡಿಸಿದ್ದು, ವಿಚಾರಣೆಯಲ್ಲಿ ಅವರ ಮೇಲಿನ ಆರೋಪಗಳು ಸಾಬೀತಾದ ಹಿನ್ನೆಲೆಯಲ್ಲಿ, ನಿಯಮಾನುಸಾರ ವಿಚಾರಣಾ ವರದಿಯ ಪ್ರತಿಯೊಂದಿಗೆ 2ನೇ ಕಾರಣ ಕೇಳುವ ಸೂಚನಾ ಪತ್ರವನ್ನು ಆರೋಪಿತ ಅಧಿಕಾರಿಯವರಿಗೆ ಜಾರಿ ಮಾಡಿ, ವಿಚಾರಣಾ ವರದಿಯ ಬಗ್ಗೆ ಲಿಖಿತ ಹೇಳಿಕೆ ಪಡೆದು ಪರಿಶೀಲಿಸಿದ ನಂತರ, ಶ್ರೀ ಎಂ.ಎನ್. ದೇವಶಿಖಾಮಣಿ, ಕೃಷಿ ಅಧಿಕಾರಿರವರಿಗೆ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957ರ ನಿಯಮ 8 (viii) ರನ್ವಯ ಸೇವೆಯಿಂದ ವಜಾ ಮಾಡುವ ದಂಡನೆಯನ್ನು ಮತ್ತು ಅವರು ದುರುಪಯೋಗಪಡಿಸಿಕೊಂಡಿರುವ ಸರ್ಕಾರಿ ಹಣ ರೂ. 61,747/- ಗಳನ್ನು ಹಾಗೂ 4.85 ಕ್ವಿಂಟಾಲ್ ಸೂರ್ಯಕಾಂತಿ ಬೀಜದ ಅಂದಿನ ಬೆಲೆಯಾದ ಕ್ವಿಂಟಾಲ್

1 ಕ್ಕೆ ರೂ. 1065/-ರಂತೆ 4.85 ಕ್ವಿಂಟಾಲ್ ಬೀಜದ ಬೆಲೆಯನ್ನು ಸಹ ವಸೂಲು ಮಾಡುವ ದಂಡನೆಯನ್ನು ಮೇಲೆ ಕ್ರಮಾಂಕ (1)ರಲ್ಲಿ ಓದಲಾದ ದಿನಾಂಕ: 10-07-1997ರ ಸರ್ಕಾರದ ಆದೇಶದಲ್ಲಿ ವಿಧಿಸಿ, ಆದೇಶಿಸಲಾಗಿದೆ.

ಶ್ರೀ ಎಂ.ಎನ್. ದೇವಶಿಖಾಮಣಿರವರು ತಮಗೆ ವಿಧಿಸಲಾದ ಮೇಲ್ಕಂಡ ದಂಡನೆಯ ವಿರುದ್ಧ ಘನ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯಲ್ಲಿ ಅರ್ಜಿ ಸಂಖ್ಯೆ 5792/1997 ರಲ್ಲಿ ಪ್ರಶ್ನಿಸಿದ್ದು, ಸದರಿ ಅರ್ಜಿಯ ಮೇಲೆ ವಿಚಾರಣೆ ನಡೆಸಿದ ನ್ಯಾಯ ಮಂಡಳಿಯ ಮೇಲೆ ಕ್ರ.ಸಂ(2)ರಲ್ಲಿ ಓದಲಾದ ದಿನಾಂಕ:07-12-2009ರ ತೀರ್ಪಿನಲ್ಲಿ ಈ ಕೆಳಕಂಡಂತೆ ಆದೇಶಿಸಿದೆ.

Taking into consideration that submission,we are of the opinion that considering the fact that the applicant was imposed with the Penalty of dismissal when he had already crossed the age of 56 years that would deprive the family of the benefit of family pension. On humanitarian ground, the penalty of dismissal may be substituted with the penalty of compulsory retirement. However, since this penalty is being imposed in place of the penalty of dismissal solely on humanitarian ground , neither the monthly pension payable to the applicant till the date of his death nor the family pension to the legal representatives of the applicant till 30-11-2009 shall be payable. Legal representatives of the applicant will be entitled to all retiral benefit of the applicant by virtue of substitution of penalty and the widow of the applicant would be entitled to family pension as per rules only with effect from 1-12-2009.

With this observation, we allow the application in part. While we affirm the finding of the disciplinary authority that the charges had been proved, we substitute the penalty imposed by the Disciplinary Authority by the penalty of compulsory retirement on the condition that the legal representatives of the deceased applicant will not be entitled to any pension due to the applicant

--3--

during his life time, but they will be entitled to receive other retrial benefits due to the applicant . The widow of the deceased applicant will be entitled to family pension as per Rules only with effect from 01-12-2009.

ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ಮೇಲ್ಕಂಡ ತೀರ್ಪಿನ ವಿರುದ್ಧ ಸರ್ಕಾರವು, ಕರ್ನಾಟಕ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ಇಲ್ಲಿ ರಿಟ್ ಅರ್ಜಿ ಸಂಖ್ಯೆ: 63156/2010(S-KAT) ಅರ್ಜಿ ಸಲ್ಲಿಸಿ, ಕರ್ನಾಟಕ ಆಡಳಿತ ನ್ಯಾಯ ಮಂಡಳಿಯು ನೀಡಿದ ತೀರ್ಪನ್ನು ರದ್ದುಗೊಳಿಸಬೇಕೆಂದು ಕೋರಲಾಗಿ, ಸದರಿ ಪ್ರಕರಣವನ್ನು ವಿಚಾರಣೆಗೆ ಕೈಗೆತ್ತಿಕೊಂಡ ಘನ ಕರ್ನಾಟಕ ಉಚ್ಚ ನ್ಯಾಯಾಲಯ, ಧಾರವಾಡ ಸಂಚಾರಿ ಪೀಠವು ದಿನಾಂಕ:27–08–2012 ರಂದು ಮೇಲೆ ಕ್ರಮ ಸಂ.(3)ರಲ್ಲಿ ಓದಲಾದ ತೀರ್ಪಿನಲ್ಲಿ ಕೆಳಕಂಡಂತೆ ಆದೇಶ ನೀಡಿದೆ.

> With regard to the submission of the learned AGA appearing for the petitioners, we are of the view that the same cannot be accepted for the reason that the intention of the department has to punish the delinquent Official in consonance with the misconduct committed by him, but not to take away his future or to deprive the legitimate entitlement of his family members. Bearing this aspect in mind, the Tribunal is highly justified in substituting the penalty of dismissal from service to the penalty of compulsory retirement from service. Hence said submission is rejected.
>
> Having regard to the facts and circumstances of the case, we are of the considered view that there is no error or illegality as such committed by the Tribunal in passing the impugned order. Hence, the writ petition fails and the same is hereby dismissed.

--4--

ಮೇಲ್ಕಂಡಂತೆ ಕರ್ನಾಟಕ ಆಡಳಿತ ನ್ಯಾಯ ಮಂಡಳಿ ಹಾಗೂ ಘನ ಕರ್ನಾಟಕ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ನೀಡಿದ ತೀರ್ಪಿನಂತೆ ಸದರಿ ಪ್ರಕರಣವಲ್ಲಿ ಪರಿಶೀಲಿಸಿ, ಶ್ರೀ ಎಂ.ಎನ್. ದೇವಶಿಖಾಮಣಿ, ಕೃಷಿ ಅಧಿಕಾರಿ (ದಿವಂಗತ) ರವರಿಗೆ ದಿನಾಂಕ:10-07-97 ರಂದು ವಿಧಿಸಿದ ದಂಡನಾದೇಶವನ್ನು ಮಾರ್ಪಡಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ ಕೃತೋಇ 81 ಕೃಪರಿ 1997,**

**ಬೆಂಗಳೂರು ದಿನಾಂಕ:22ನೇ ಮಾರ್ಚ್ 2014.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಕಾರಣಗಳಿಂದಾಗಿ, ದಿವಂಗತ ಎಂ.ಎನ್. ದೇವಶಿಖಾಮಣಿ, ಹಿಂದಿನ ಕೃಷಿ ಅಧಿಕಾರಿ, ಕೃಷಿ ಪಾಠಶಾಲೆ ದೇವಿ ಹೊಸೂರು, ಧಾರವಾಡ ಜಿಲ್ಲೆ, ಇವರಿಗೆ ಸರ್ಕಾರದ ಆದೇಶ ಸಂಖ್ಯೆ: ಕೃತೋಇ 7 ಕೃಪವಿ 94, ದಿನಾಂಕ: 10-07-1997 ರಲ್ಲಿ, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(viii) ರನ್ವಯ **"ಸೇವೆಯಿಂದ ವಜಾ ಮಾಡಿ"** ಹೊರಡಿಸಿದ ಆದೇಶವನ್ನು ಮಾರ್ಪಡಿಸಿ, ಸದರಿಯವರನ್ನು ಸೇವೆಯಿಂದ ವಜಾಗೊಳಿಸಿದ ದಿನದಿಂದ ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 8(vi) ರನ್ವಯ ಅವರಿಗೆ ಸೇವೆಯಿಂದ **'ಕಡ್ಡಾಯ ನಿವೃತ್ತಿ ಗೊಳಿಸುವ'** ದಂಡನೆಯನ್ನು ವಿಧಿಸಿ ಆದೇಶಿಸಿದೆ.

ಹಾಗೂ ಸದರಿ ಅಧಿಕಾರಿಯವರಿಂದ ಸರ್ಕಾರಕ್ಕೆ ಉಂಟಾಗಿರುವ ನಷ್ಟದ ಮೊತ್ತ ರೂ. 61,747.00 (ರೂಪಾಯಿ ಅರವತ್ತೊಂದು ಸಾವಿರದ ಏಳುನೂರ ನಲವತ್ತೇಳು ಮಾತ್ರ) ಹಾಗೂ 4.85 ಕ್ವಿಂಟಾಲ್ ಸೂರ್ಯಕಾಂತಿ ಬೀಜದ ಅಂದಿನ ಬೆಲೆಯಾದ ಕ್ವಿಂಟಾಲ್ 1ಕ್ಕೆ ರೂ. 1065/- ಗಳಂತೆ, 4.85 ಕ್ವಿಂಟಾಲ್ ಬೀಜದ ಮೊಬಲಗು ಬೆಲೆಯನ್ನು ಸಹ ಇವರ ನಿವೃತ್ತಿ ಉಪದಾನಗಳಿಂದ ವಸೂಲು ಮಾಡಲು ಆದೇಶಿಸಿದೆ.

ದಿವಂಗತ ಎಂ. ಎನ್. ದೇವಶಿಖಾಮಣಿ ಇವರ ಕಾನೂನು ಬದ್ಧ ವಾರಸುದಾರರು (Legal heirs) ನಿಯಮಾನುಸಾರ ಬರುವ ನಿವೃತ್ತಿ ವೇತನದ ಎಲ್ಲಾ ಸೌಲಭ್ಯಗಳನ್ನು ಪಡೆಯಲು ಅರ್ಹರಿರುತ್ತಾರೆ.

ಮತ್ತು ದಿವಂಗತ ಎಂ.ಎಸ್. ದೇವಶಿಖಾಮಣಿ. ಇವರ ಅಥವಾ ಪತ್ನಿಯವರು ದಿನಾಂಕ:01-12-2009ರಿಂದ ನಿಯಮಾನುಸಾರ ಪಿಂಚಣಿ ಸೌಲಭ್ಯವನ್ನು ಪಡೆಯಲು ಅರ್ಹರಿರುತ್ತಾರೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ.

(ಮಂಜುನಾಥ ಪಾಟೀಲ್)
ಸರ್ಕಾರದ ಅಧೀನ ಕಾರ್ಯದರ್ಶಿ,
ಕೃಷಿ ಇಲಾಖೆ.

ಇವರಿಗೆ:-

1) ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಲೆಕ್ಕತಪಾಸಣೆ,ಜಿ-05) ಕರ್ನಾಟಕ, ಬೆಂಗಳೂರು.
2) ಆಯುಕ್ತರು, ಕೃಷಿ ಇಲಾಖೆ,ಶೇಷಾದ್ರಿ ರಸ್ತೆ, ಬೆಂಗಳೂರು.
3) ಆಯುಕ್ತರು, ಜಲಾನಯನ ಅಭಿವೃದ್ಧಿ ಇಲಾಖೆ, ಕಾವೇರಿ ಭವನ, ಬೆಂಗಳೂರು.
   ಸರ್ಕಾರಿ ವಕೀಲರು, ಕರ್ನಾಟಕ ಉಚ್ಚ ನ್ಯಾಯಾಲಯದ ಸಂಚಾರಿ ಪೀಠ, ಧಾರವಾಡ ಇವರಿಗೆ (ರಿಟ್ ಅರ್ಜಿ ಸಂಖ್ಯೆ: 63156/2010(S-KAT) ಮಾಹಿತಿಗಾಗಿ
4) ಸರ್ಕಾರಿ ವಕೀಲರು, ಕರ್ನಾಟಕ ಆಡಳಿತ ನ್ಯಾಯ ಮಂಡಳಿ, ಬಿ.ಡಿ.ಎ. ಶಾಪಿಂಗ್ ಕಾಂಪ್ಲೆಕ್ಸ ಇಂದಿರಾನಗರ, ಬೆಂಗಳೂರು-38 (ಕೆ.ಎ.ಟಿ. ಅ.ಸಂ.5792/97ಕ್ಕೆ ಸಂಬಂಧಿಸಿದಂತೆ) ಮಾಹಿತಿಗಾಗಿ
5) ಜಂಟಿ ಕೃಷಿ ನಿರ್ದೇಶಕರು, ಧಾರವಾಡ/ಕಾರವಾರ.
6) ಸಹಾಯಕ ಕೃಷಿನಿರ್ದೇಶಕರು, ಕೃಷಿ ಪಾಠ ಶಾಲೆ ದೇವಿಹೊಸೂರು, ಧಾರವಾಡ ಜಿಲ್ಲೆ.
7) ಸಹಾಯಕ ಕೃಷಿ ನಿರ್ದೇಶಕರು ಭಟ್ಕಳ, ಕಾರವಾರ ಜಿಲ್ಲೆ.
8) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಕೃಷಿ ಇಲಾಖೆ ಅವರ ಆಪ್ತ ಸಹಾಯಕರು, ಬೆಂಗಳೂರು.
9) ಸಚಿವ ಸಂಪುಟ ಶಾಖೆ ಸಂಖ್ಯೆ:ಸಿ:72/2014
10) ಸರ್ಕಾರದ ಉಪಕಾರ್ಯದರ್ಶಿ, ಕೃಷಿ ಇಲಾಖೆ, ಬೆಂಗಳೂರು
11) ಪ್ರತಿಯನ್ನು ಸಂಬಂಧಪಟ್ಟ ಅಧಿಕಾರಿಯವರ ಕಾನೂನು ಬದ್ಧ ವಾರಸುದಾರರಿಗೆ (ಕೃಷಿ ಆಯುಕ್ತರ ಮೂಲಕ)
12) ಸಮನ್ವಯ ಶಾಖೆ/ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.